ಆದರೆ, 90ರ ದಶಕದಲ್ಲಿ ಮೂಲಭೂತವಾದವು ಪ್ರಬಲವಾದಂತೆ ತೋರಿತು. ಆ ಸಂದರ್ಭದಲ್ಲಿ ನಾನು ಧರ್ಮಭ್ರಷ್ಟನೆಂದು ಕರೆಸಿಕೊಂಡಿದ್ದುಂಟು. ಅದೆಲ್ಲ ಪ್ರಯಾಣದ ಹಂತಗಳೆಂದು ಭಾವಿಸುವೆ. ಕಾಲವು ಎಷ್ಟೊಂದು ವೇಗವಾಗಿ ಸಾಗುತ್ತಿದೆ. ನಾವು ಕಾಲದ ಜೊತೆಗೆ ಸಾಗಬೇಕೇ ವಿನಃ ವಿವಾದಗಳ ಸುಳಿಯಲ್ಲಿಯೇ ನಿಂತುಬಿಡಬಾರದು. ನಾನು ಪ್ರೀತಿಸುವ, ಸಾಧಿಸಲು ಆಯ್ಕೆ ಮಾಡಿಕೊಂಡಿರುವ ಕಲಾಪ್ರಕಾರವೇ ಮುಖ್ಯವೆಂದು ನಾನು ನಂಬಿದ್ದೇನೆ.

ಅಂತಿಮವಾಗಿ ದೇವರು ಅಥವಾ ದೇವ ತತ್ತ್ವ ಎನ್ನುವುದು ಎಲ್ಲಿದೆ? ಪ್ರತಿಯೊಬ್ಬ ವ್ಯಕ್ತಿಯ ಅಂತರಂಗದಲ್ಲಿಯೇ ಇದೆಯಲ್ಲವೇ. ಅದು ಒಬ್ಬ ವ್ಯಕ್ತಿಯು ಅಂತರಂಗದಲ್ಲಿ ನಂಬಿರುವ, ಅತ್ಯುನ್ನತವಾದ ತತ್ತ್ವವನ್ನು ಪ್ರತಿನಿಧಿಸುತ್ತದೆ. ಕಲೆಗೆ ತಮ್ಮ ಜೀವನವನ್ನೇ ಸಮರ್ಪಿಸಿಕೊಂಡ ಕಲಾವಿದರ ಪಾಲಿಗೆ ಪರಿಶುದ್ಧವಾದ ತತ್ತ್ವಗಳೆಂದರೆ ಅವು ಕಲೆಗೆ ಸಂಬಂಧಿಸಿದ್ದೇ ಆಗಿರುತ್ತವೆ. ಶಾಸ್ತ್ರೀಯ ಕಲಾಪ್ರಕಾರಗಳು ಮತ್ತು ಎಲ್ಲ ಲಲಿತಕಲೆಗಳು ಈ ಅಧ್ಯಾತ್ಮದ ಸ್ಥಿತಿಯನ್ನು ತಲುಪುವುದಕ್ಕೆ ಪಥದರ್ಶನ ಮಾಡಬಲ್ಲವು. ದೈವತ್ವವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಸಾಧನೆಯ ಸ್ಥಿತಿಯೆಂದರೆ ಅದು ಆ ವ್ಯಕ್ತಿಗೆ ದೊರೆತ 'ಯೋಗ' ಎಂದು ಹೇಳಬೇಕು. ಒಬ್ಬ ವ್ಯಕ್ತಿಯು ನಂಬಿದ ಕಲಾಪ್ರಕಾರದ ಮೂಲಕ ಅವನು ಗುರುತಿಸುವ ಸತ್ಯ ಮತ್ತು ಸೌಂದರ್ಯವು ದೈವತ್ವದ ರೂಪಕವೂ ಹೌದು. ದೈವತ್ವದ ಅಭಿವ್ಯಕ್ತಿಗಳೂ ಹೌದು.

**◆ ಪ್ರಶಸ್ತಿಗಳು ನಿಮ್ಮನ್ನು ಅರಸಿ ಬಂದಂತೆ ಕಾಣಿಸುತ್ತದೆ, ಅಲ್ಲವೇ?**

ಹೌದು. ಆ ಮಟ್ಟಿಗೆ ನನಗೆ ಸಂತಸವಿದೆ. ನಾನು ಮಲೇಷ್ಯಾದಲ್ಲಿ 'ಸೂತ್ರ ಫೌಂಡೇಶನ್' ಅನ್ನು ಕಟ್ಟಿ ಬೆಳೆಸುವುದಕ್ಕೆ ಸಾಕಷ್ಟು ಶ್ರಮಿಸಿದ್ದೇನೆ. ಎಡರುತೊಡರುಗಳನ್ನು ಎದುರಿಸಿದ್ದೇನೆ. ಆದರೆ, ಇಂದು ಫೌಂಡೇಷನ್ ಒಡಿಸ್ಸಿ ನೃತ್ಯಪ್ರಕಾರವನ್ನು ಜಾಗತಿಕ ವೇದಿಕೆಗಳಲ್ಲಿ ಪ್ರಸ್ತುತಪಡಿಸುತ್ತದೆ. ಪ್ರಶಸ್ತಿಗಳು ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಹೊಣೆಗಾರಿಕೆಯನ್ನೂ ಹೆಚ್ಚಿಸುತ್ತವೆ. ಭಾರತದ ಉನ್ನತ ನಾಗರಿಕ ಗೌರವವಾದ ಪದ್ಮಶ್ರೀ ಪುರಸ್ಕಾರ ದೊರೆತಿದೆ. ನನ್ನ ಪಾಲಿಗೆ ಭಾರತದ ಸಂಗೀತ ನಾಟಕ ಅಕಾಡೆಮಿಯು ಕೊಟ್ಟ ಪ್ರಶಸ್ತಿ ಬಹುಮಾನ್ಯವಾದುದು. ಯಾಕೆಂದರೆ ಅದು ವಿದ್ವಾಂಸ ಕಲಾವಿದರೆಲ್ಲ ಸೇರಿ ಕೊಡುವ ಗೌರವವಾಗಿದೆ. ಮಲೇಷ್ಯಾ ಸರ್ಕಾರವು ನನಗೆ 'ದಾತುಕ್' ಎಂಬ ಗೌರವವನ್ನು ಕೊಟ್ಟಿದೆ. ಅಂದರೆ ಮನೆಯ 'ದೊಡ್ಡಜ್ಜ' ಎಂಬ ಗೌರವವದು.

**◆ ಒಡಿಸ್ಸಿಗೂ, ಪುರಿ ಜಗನ್ನಾಥ ದೇವಾಲಯ ಹಾಗೂ ಕೊನಾರ್ಕದ ಸೂರ್ಯ ದೇವಾಲಯಕ್ಕೆ ಹತ್ತಿರದ ನಂಟು. ಹತ್ತಾರು ಕಲಾಮೇಳಗಳು, ಉತ್ಸವಗಳು ಇಲ್ಲಿ ನಡೆಯುತ್ತವೆ. ಇವುಗಳೆಲ್ಲ ನಿಮ್ಮ ಕಲಾಪಯಣವನ್ನು ಪ್ರಭಾವಿಸಿವೆಯೇ?**

ಪುರಿ ಜಗನ್ನಾಥ ದೇವಾಲಯ, ಕೊನಾರ್ಕ ಸೂರ್ಯ ದೇವಾಲಯ ಮತ್ತು ಒಡಿಸ್ಸಿ ನೃತ್ಯ ಪರಂಪರೆಯ ನಡುವೆ ಸಂಬಂಧವಿದೆ. ಅವು ಒಡಿಶಾದ ಮೂರು ಪ್ರಮುಖ ಪಂಥಗಳನ್ನು ಪ್ರತಿನಿಧಿಸುತ್ತ, ಜಾಗತಿಕ ನಕಾಶೆಯಲ್ಲಿ ಒಡಿಶಾಕ್ಕೆ ಸ್ಥಾನ ದೊರಕಿಸಿಕೊಟ್ಟಿವೆ. ಅದೇರೀತಿ ಅಂತಹ ಜಾಗಗಳು ಮತ್ತು ಉತ್ಸವಗಳು ನನ್ನ ಬದುಕಿನಲ್ಲಿಯೂ ಪ್ರಾಧ್ಯಾನತೆ ಪಡೆದಿವೆ.

ಪುರಿ ಜಗನ್ನಾಥ ದೇವಾಲಯದಲ್ಲಿ ಹಿಂದೆ ಮಹಾರಿಗಳು ಒಡಿಸ್ಸಿ ನೃತ್ಯ ಪ್ರಸ್ತುತಪಡಿಸುತ್ತಿದ್ದರು. ಅಲ್ಲಿಯೇ ಅಲ್ಲವೇ ಸಂತಕವಿ ಜಯದೇವ ರಾಧಾ–ಕೃಷ್ಣರ ಪ್ರೇಮಾನುರಾಗವನ್ನು ಒರೆಯುವ 'ಗೀತಗೋವಿಂದ' ಬರೆದು ಶ್ರೀ ಜಗನ್ನಾಥ ದೇವರಿಗೆ ಅರ್ಪಿಸಿದ್ದು. ಕೊನಾರ್ಕ ಸೂರ್ಯದೇವಾಲಯವಂತೂ ವಿಶೇಷವಾದ ನೃತ್ಯ ಸಭಾಂಗಣವನ್ನು ಹೊಂದಿರುವ ದೇವಳ. ಅದು ಎಲ್ಲ ಒಡಿಸ್ಸಿ ಕಲಾವಿದರು, ಗುರುಗಳಿಗೆ ಪ್ರೇರಣಾದಾಯಿ. ನಾನು ಮೊತ್ತಮೊದಲು ಒಡಿಸ್ಸಿ ಕಲಿಯಲು ಪುರಿ ಜಗನ್ನಾಥ ದೇವಾಲಯಕ್ಕೆ ತೆರಳಿದ್ದೆ. ಕೊನಾರ್ಕದಲ್ಲಿ ಒಂದಾದರೂ ಒಡಿಸ್ಸಿ ನೃತ್ಯವನ್ನು ಪ್ರಸ್ತುತಪಡಿಸಬೇಕು ಎಂಬುದು ಎಲ್ಲ ಒಡಿಸ್ಸಿ ಕಲಾವಿದರ ಕನಸಾಗಿರುತ್ತದೆ. ಹಿರಿಯ ಛಾಯಾಗ್ರಾಹಕ ಪ್ರತಾಪ್ ಅವರು 'ರಾಮ್ಲಿ ಇನ್ ಕೊನಾರ್ಕ್' ಎಂಬ ಛಾಯಾಚಿತ್ರ ಪ್ರದರ್ಶನವನ್ನು ಕೊನಾರ್ಕದಲ್ಲಿ ಆಯೋಜಿಸಿದ್ದಾರೆ. ಕಲಾಪಯಣದಲ್ಲಿ ಪ್ರತಿಯೊಂದು ಪುಟ್ಟ ಹೆಜ್ಜೆಯೂ ಅತ್ಯಂತ ಪ್ರಮುಖವೇ ಆಗಿರುತ್ತದೆ.

●